5. ರಾಯಭಾಗ	57	26	92.38
6. ಅಥಣಿ	72	38	97.00
ಒಟ್ಟು	**503**	**214**	**505.85**

1353 (1375) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಸಗಡ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂನ ಜಿಲ್ಲೆಗೆ 2006–07ನೇ ಸಾಲಿನಲ್ಲಿ ಅತಿವೃಷ್ಟಿ ಕಾಮಗಾರಿಗಳನ್ನು ತೆಗೆದುಕೊಳ್ಳಲು ಬಿಡುಗಡೆಯಾದ ಅನುದಾನ ಮತ್ತು ಆಹಾರಧಾನ್ಯ ಎಷ್ಟು;

ಆ) ಈ ಯೋಜನೆಯಡಿ ಬೆಳಗಾಂವ ಜಿಲ್ಲೆಯಲ್ಲಿ ಬಿಡುಗಡೆಯಾದ ಅನುದಾನ ಮತ್ತು ಆಹಾರಧಾನ್ಯದ ಪ್ರಮಾಣವೆಷ್ಟು (ತಾಲ್ಲೂಕುವಾರು ವಿವರ ನೀಡುವುದು);

ಇ) ಅತಿವೃಷ್ಟಿಯಲ್ಲಿ ತೆಗೆದುಕೊಂಡ ಕಾಮಗಾರಿಗಳು ಯಾವುವು ಹಾಗೂ ಅವುಗಳ ಪ್ರಗತಿ ಏನು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) 2006–07ನೇ ಸಾಲಿನಲ್ಲಿ ಅತಿವೃಷ್ಟಿ ಕಾಮಗಾರಿಗಳನ್ನು ಕೈಗೊಳ್ಳಲು ರೂ.6793.00 ಲಕ್ಷ ಹಣ ಹಾಗೂ 3500 ಮೆ.ಟನ್ ಆಹಾರಧಾನ್ಯ ಬಿಡುಗಡೆ ಮಾಡಲಾಗಿದೆ.

ಆ) 'ಅ' ನಲ್ಲಿರುವಂತೆ, ತಾಲ್ಲೂಕುವಾರು ಅನುದಾನ ಹಾಗೂ ಆಹಾರಧಾನ್ಯ ಬಿಡುಗಡೆ ಮಾಡುವುದಿಲ್ಲ. ಜಿಲ್ಲಾವಾರು ಬಿಡುಗಡೆ ಮಾಡಲಾಗುತ್ತದೆ.

ಇ) 2006–07ನೇ ಸಾಲಿನಲ್ಲಿ ಅತೀವೃಷ್ಟಿಯಲ್ಲಿ ಒಟ್ಟು 789 ಕಾಮಗಾರಿಗಳಿಗೆ ಮಂಜೂರಾತಿಯನ್ನು ನೀಡಲಾಗಿದ್ದು, ಅವುಗಳ ಪೈಕಿ 310 ಕಾಮಗಾರಿಗಳು ಈಗಾಗಲೇ ಪೂರ್ತಿಗೊಂಡಿದ್ದು, ಉಳಿದ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

1354 (2046) ಶ್ರೀ ಮೋಹನ್ ಕೃಷ್ಣಶೆಟ್ಟಿ (ಕುಮಟಾ) :– ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಮಟಾ ತಾಲ್ಲೂಕಿನ ಮೂರೂರು–ಕಲ್ಲಬ್ಬೆ ಗ್ರಾಮಗಳಲ್ಲಿ ವಿಲೇಜ್ ಫಾರೆಸ್ಟ್ ಪಂಚಾಯತ್ ಎನ್ನುವುದನ್ನು ದುರುಪಯೋಗ ಪಡಿಸಿಕೊಂಡು ಅರಣ್ಯ ಲೂಟಿ, ಕಲ್ಲುಕೋರೆ ಲೂಟಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಅರಣ್ಯ ಲೂಟಿ ಅಕ್ರಮ ಗಣಿಗಾರಿಕೆಯಿಂದ ಕೋಟ್ಯಾಂತರ ರೂಪಾಯಿ ನಷ್ಟ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಸರ್ಕಾರ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಸಿ.ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಕುಮಟಾ ತಾಲ್ಲೂಕಿನಲ್ಲಿ ಮೂರೂರು–ಕಲ್ಲಬ್ಬೆ ಗ್ರಾಮಗಳಲ್ಲಿ ವಿಲ್ಲೇಜ್ ಫಾರೆಸ್ಟ್ ಪಂಚಾಯತ್ ಎನ್ನುವುದನ್ನು ದುರುಪಯೋಗಪಡಿಸಿಕೊಂಡು ಅರಣ್ಯ ಲೂಟಿ ಮಾಡಿದ ಪ್ರಕರಣಗಳು ಈವರೆಗೆ ವರದಿಯಾಗಿರುವುದಿಲ್ಲ. ಆದರೆ ಚಿಕ್ಕಮಟ್ಟ ಅನಧಿಕೃತ ಮರಗಳ್ಳತನ ಪ್ರಕರಣ ನಡೆದ ಬಗ್ಗೆ ಗುನ್ನೆ ಪ್ರಕರಣ ದಾಖಲಿಸಲಾಗಿದ್ದು ವಿವರ ಕೆಳಕಂಡಂತಿದೆ:–

ವರ್ಷ	ದಾಖಲಾದ ಪ್ರಕರಣಗಳು	ಜಪ್ತಿ ಮಾಡಿದ ನಾಟಾ ಘ.ಮೀ	ಅರಣ್ಯ ಉತ್ಪನ್ನದ ಪ್ರಕರಣ ಜಲಾವು ಘ.ಮೀ	ಎಳೆ ನಂ.
2004–05	8	2.877	4.000	5
2005–06	2	0.840	--	--
2006–07	4	3.629	--	--

ಸದರಿ ಜಮೀನು ಕಂದಾಯ ಇಲಾಖೆಯ ಜಮೀನಾಗಿರುವುದರಿಂದ ಅಕ್ರಮ ಗಣಿಗಾರಿಕೆ ತಡೆಗಟ್ಟುವುದು ಅರಣ್ಯ ಇಲಾಖೆಗೆ ಸಂಬಂಧಿಸಿರುವುದಿಲ್ಲ.

ಆ) ಸದರಿ ಈ ಮೇಲಿನ ಸ್ಥಳಗಳಲ್ಲಿ ಕೋಟ್ಯಾಂತರ ರೂಪಾಯಿ ನಷ್ಟ ಉಂಟಾಗುತ್ತಿರುವ ಅರಣ್ಯ ಲೂಟಿ ಅಂದರೆ ಮರಗಳ್ಳತನ ಪ್ರಕರಣಗಳು ನಡೆದಿರುವುದಿಲ್ಲ. ಆದರೆ, ಈ

ಮೇಲೆ ನಮೂದಿಸಲಾದಂತೆ ಚಿಕ್ಕಮಟ್ಟ ಗುನ್ನೆ ನಡೆದಿದ್ದು ಈ ಕುರಿತು ಪ್ರಕರಣ ದಾಖಲಿಸಲಾಗಿದ್ದು ಕಾನೂನಿನಂತೆ ಕ್ರಮ ಜರುಗಿಸಲಾಗಿದೆ.

ಇ) ಯಾವುದೇ ಅರಣ್ಯ ಅಕ್ರಮ ಪ್ರಕರಣಗಳು ಕಂಡು ಬಂದಲ್ಲಿ ಅವುಗಳನ್ನು ನಿಯಂತ್ರಿಸುವ ಕುರಿತು ಅರಣ್ಯ ಸಿಬ್ಬಂದಿಗಳು ಗಸ್ತು ತಿರುಗುವುದು, ರಾತ್ರಿ ಪಹರೆ, ರಕ್ಷಣಾ ಶಿಬಿರಗಳ ನಿರ್ಮಾಣ ಮುಂತಾದ ಅರಣ್ಯ ರಕ್ಷಣಾ ಕ್ರಮಗಳ ಮೂಲಕ ಇಂತಹ ಪ್ರಕರಣ ಪತ್ತೆ ಹಚ್ಚಿ ಕಾನೂನು ಕ್ರಮ ಜರುಗಿಸಲಾಗುತ್ತಿದೆ.

1355 (2047) ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟಾ) :– ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ವ್ಯಾಪಕ ಅರಣ್ಯ ಲೂಟಿಯನ್ನು ತಡೆಗಟ್ಟಲು ಸರ್ಕಾರ ಏನು ಕ್ರಮ ಕೈಗೊಂಡಿದೆ;

ಆ) ಉಪ ವಿಭಾಗೀಯ ಮಟ್ಟದಲ್ಲಿ ಕ್ಷಿಪ್ರ ಕಾರ್ಯಾಚರಣೆ ಪಡೆ ರಚನೆ ಮಾಡುವ ಬಗ್ಗೆ ಸರ್ಕಾರ ಯೋಚಿಸಿದೆಯೇ;

ಇ) ಯೋಚಿಸಿದ್ದರೆ, ಯಾವ ಕ್ರಮ ಕೈಗೊಳ್ಳಲಾಗುವುದು; ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಸಿ.ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಉತ್ತರ ಕನ್ನಡ ಜಿಲ್ಲೆಯು ಅರಣ್ಯ ಸಂಪದ್ಭರಿತ ಜಿಲ್ಲೆಯಾಗಿರುವುದರಿಂದ ಅರಣ್ಯ ಸಂಪತ್ತು ಲೂಟಿಯಾಗದಂತೆ ಇಲಾಖೆಯು ಎಲ್ಲಾ ತರಹದ ಮುಂಜಾಗ್ರತಾ ಕ್ರಮವನ್ನು ತೆಗೆದುಕೊಂಡಿದೆ. ಮುಖ್ಯವಾಗಿ ಜಿಲ್ಲೆಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳನ್ನು ಒಳಗೊಂಡ ಅರಣ್ಯ ಸಂಚಾರಿ ದಳವನ್ನು ಸ್ಥಾಪಿಸಲಾಗಿದೆ. ಅಷ್ಟೇ ಅಲ್ಲದೇ. ಪ್ರತಿ ವಿಭಾಗದಲ್ಲಿ ಅರಣ್ಯ ಜಾಗೃತ ದಳವನ್ನು ನಿರ್ಮಿಸಿ, ಪಾಳಿಯ ಪ್ರಕಾರ ರಾತ್ರಿಯಲ್ಲಿ ಗಸ್ತು ಮಾಡಲಾಗುತ್ತಿದೆ. ಅರಣ್ಯ ಸಿಬ್ಬಂದಿಗಳಿಗೆ ಅರಣ್ಯ ಸಂಪತ್ತು ಕಳ್ಳ ಸಾಗಾಣಿಕೆ ಕುರಿತು ಕೂಡಲೇ ಕೇಂದ್ರ ಸ್ಥಾನಕ್ಕೆ ಮಾಹಿತಿ ಪೂರೈಸಲು